# <u>ನೆನೆವೆ ನಾನನ್ಯರ ಕಾಣೆನು</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 355.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 173.
3. **Note:** Lyrics in both the above reference books fully match and the singer has followed these wordings.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ತೋಡಿ ತಾಳ: ರೂಪಕ

ನೆನೆವೆ ನಾನನ್ಯರ ಕಾಣೆನು || ಪ ||

ಕೊಡುವರೊಳಗೆ ನೀನೇ ಎಂದು
ಬಡವನಾಗಿ ನಾನು ಬಂದು
ಉಡಿಯ ಪಿಡಿದು ಬೇಡಿಕೊಂಬೆ ನಾ
ಉಡಿಯ ಪಿಡಿದು ಬೇಡಿಕೊಂಬೆ
ದೃಢದಿ ವರವ ಕೊಡುವ ದೊರೆಯೆ || 1 ||

ರಾಮದೂತನಾಗಿ ಬಂದು
ನಾಮಮುದ್ರಿಕೆ ಜಾನಕಿಗಿತ್ತು
ಭೀಮನಾಗಿ ಕರವ ಮುಗಿವನಾ
ಭೀಮನಾಗಿ ಕರವ ಮುಗಿದು
ಜ್ಞಾನಪೂರ್ಣ ಪ್ರಾಣನೆನಿಪನ || 2 ||

ಈಶ ನರಸಿಂಹನಾದ
ವಾಸವಾದಿ ವಿನುತ ಶೇಷ

ದೋಷರಹಿತ ಪುರಂದರನಾ
ದೋಷರಹಿತ ಪುರಂದರ ವಿಠಲ
ದಾಸ ಭಾರತೀಶನೆನಿಪನ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಉಡಿಯ ಪಿಡಿದು** – ಸೆರಗೊಡ್ಡಿ.

**ಜ್ಞಾನಪೂರ್ಣ** – ಸರ್ವಜ್ಞಾಚಾರ್ಯರಾಗಿ (ಮಧ್ವಾಚಾರ್ಯರಾಗಿ).

**Classification:** Keerthane
**Ankita:** purandara vittala
**Location:** NA
**Category:** Hanuma Stuti, Madhwacharya Stuti
**Sub-Category:** bhima, hanuma, madhva, madhwacharya, hanuma-bhima-madhva, badava, arasa, rama, sita, mudre, kai, Narasimha, shesha, Bharati,
**Pravachana:** NA
**Explanation:** NA